# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 38/2022**

**ದೋ.ಸಾ. :5 ಫ್ರಾ.ಸಾ. :3**

| | | |
|---|---|---|
| ಸಾಕ್ಷಿಯ ಹೆಸರು | : | ಸಮೀರ್ ನಬೀ ಸಾಬ್ ಶೇಖ್ |
| ತಂದೆಯ ಹೆಸರು | : | ನಬೀ ಸಾಬ್ ಶೇಖ್ |
| ವಯಸ್ಸು | : | 31 ವರ್ಷ |
| ಕೆಲಸ | : | ಕೂಲಿ |
| ವಾಸ | : | ಗುಂಜಾವತಿ, ಮುಂಡಗೋಡ |

**ದಿನಾಂಕಃ 25-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಚಾ.ಸಾ.1 ನನ್ನ ತಮ್ಮ, ಚಾ.ಸಾ.4 ಮತ್ತು 7 ನನ್ನ ಸಂಬಂಧಿಕರು, ಚಾ.ಸಾ.6 ನನ್ನ ಅಕ್ಕ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ. 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ದೂಡಾಡಿಲ್ಲ ಹಾಗೂ ಆರೋಪಿತರು ಚಾ.ಸಾ.6 ರವರಿಗೂ ಸಹ ಹೊಡೆದದ್ದು, ಬಡಿದಿದ್ದು ಇರುವುದಿಲ್ಲ ಹಾಗೂ ಅವಳ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿರುವುದಿಲ್ಲ. 3 ನೇ ಆರೋಪಿತನು ನನಗೆ ಹೊಡೆದಿಲ್ಲ. 3 ಮತ್ತು 4 ನೇ ಆರೋಪಿತರು ಸೇರಿ ನಮಗೆಲ್ಲಾ ಹೊಡೆದದ್ದು ಇರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿದ್ದು ಇರುವುದಿಲ್ಲ. ನನ್ನ ಅಕ್ಕಳಾದ ಚಾ.ಸಾ.6 ರವರು ಕೆಲಸ ಮಾಡುವಾಗ ಬಿದ್ದು ನೋವು ಮಾಡಿಕೊಂಡಿದ್ದು, ಈ ಬಗ್ಗೆ ಮುಂಡಗೋಡದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾಳೆ. ನಾನು ಘಟನೆ ಕುರಿತಂತೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ, ಅನುಮತಿ ನೀಡಲಾಯಿತು)

2. ದಿನಾಂಕ 14.04.2019 ರಂದು ನಾನು ಹಾಗೂ ನನ್ನ ತಮ್ಮ ಚಾ.ಸಾ.1 ಹಾಗೂ ಸಂಬಂಧಿ ಚಾ.ಸಾ.4 ಸೇರಿ, ಮಾವನ ಮಗಳಾದ ಶಬಾನ ಇವಳ ಮದುಗೆ ಹೋಗಿದ್ದೆವು, ನಂತರ ಬಂದ ನೆಂಟರಿಗೆ ಊಟವನ್ನು ಕೊಡುತ್ತಿದ್ದೆವು, ಅಲ್ಲಿಗೆ ಊಟಕ್ಕೆ ಬಂದ 1 ನೇ ಆರೋಪಿತನು ನನಗೆ ಉದ್ದೇಶಿಸಿ ತಾನು ಊಟ ಮಾಡಿದ ತಟ್ಟೆಯಲ್ಲಿ ಬೇರೆಯವರಿಗೆ ಊಟ ಕೊಡು ಎಂದು ಹೇಳಿದಾಗ, ಆ ಸಮಯದಲ್ಲಿ ಮಾತಿಗೆ ಮಾತಾಗಿದ್ದು,1 ನೇ ಆರೋಪಿತನು ತಟ್ಟೆಯಿಂದ ನನಗೆ ಹೊಡೆಯಲು ಬಂದಿರುತ್ತಾನೆ ಎಂದರೆ ಸರಿಯಲ್ಲ.

3. ನಂತರ ದಿನಾಂಕ 15.04.2019 ರಂದು ರಾತ್ರಿ ನಾವು ನಮ್ಮ ಅತ್ತೆ ಫಾತಿಮಾ ಇವರ ಮನೆಯಲ್ಲಿದ್ದಾಗ 1 ನೇ ಆರೋಪಿತನು ಅಲ್ಲಿಗೆ ಬಂದು ಚಾ.ಸಾ.7 ರವರ ಹತ್ತಿರ ಚಾ.ಸಾ. 4 ರವರಿಗೆ ಹೊಡೆಯುವುದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾ.ಸಾ. 7 ರವರು ಜಗಳ ಮಾಡಬೇಡಿ ಎಂದು ಹೇಳಿದಾಗ 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೂಡಾಡಿದರು ಎಂದರೆ ಸರಿಯಲ್ಲ . ಚಾ.ಸಾ 6 ರವರು ಅಲ್ಲಿಗೆ ಹೋದಾಗ 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.6 ವರಿಗೆ ಕೈಯಿಂದ ತಲೆಗೆ ಹೊಡೆದು, ಆಕೆಯ ಬಟ್ಟೆಯನ್ನು ಹರಿದು ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿ ದೂಡಿ ಹಾಕಿದರು ಎಂದರೆ ಸರಿಯಲ್ಲ. ಆಗ ಆಕೆ ಕೆಳಗೆ ಬಿದ್ದಿದ್ದು, ಆಕೆಯ ತಲೆಗೆ ಒಳಪೆಟ್ಟು ಆಯಿತು ಎಂದರೆ ಸರಿಯಲ್ಲ. ಇದನ್ನು ನೋಡಿ ಬಿಡಿಸಲು ಹೋದ ನನಗೆ 3 ನೇ ಆರೋಪಿತನು ಕೈಯಿಂದ ಹೊಡೆದನು ಎಂದರೆ ಸರಿಯಲ್ಲ. ನಂತರ 3 ಮತ್ತು 4 ನೇ ಆರೋಪಿತರು ಸೇರಿ ನಮಗೆಲ್ಲರಿಗೂ ಕೈಯಿಂದ ಹೊಡೆದರು ಎಂದರೆ ಸರಿಯಲ್ಲ. ಊರಿನ ಜನ ಬರುವುದನ್ನು ನೋಡಿ, ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ನಾವು ಚಾ.ಸಾ.6 ರವರಿಗೆ ಮುಂಡಗೋಡ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಚಾ.ಸಾ.6 ರವರು ಬಿದ್ದು ಪೆಟ್ಟು ಮಾಡಿಕೊಂಡಿದ್ದರಿಂದ ನಾವು ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ದಿನಾಂಕ 16.05.2019 ರಂದು ಚಾ.ಸಾ.13 ರವರ ಸಮಕ್ಷಮ ಈ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.4 ಎಂದು ಗುರುತಿಸಲಾಯಿತು.

4. ಈ ಪ್ರಕರಣದ 4 ನೇ ಆರೋಪಿತನು ನನ್ನ ಹಾಗೂ ಚಾ.ಸಾ.4 ಮತ್ತು 1 ರವರ ಮೇಲೆ ದೂರನ್ನು ನೀಡಿದ್ದು,ಅದು ಇದೇ ನ್ಯಾಯಾಲಯದಲ್ಲಿ ಸ್ಪೆಶಲ್ ಕೇಸ್ ನಂಬರ 27/2020 ರಲ್ಲಿ

ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಅವರು ಈ ಪ್ರಕಣದಲ್ಲಿ ನನ್ನ ಹಾಗೂ ಚಾ.ಸಾ.1 ಮತ್ತು 4 ರವರ ವಿರುದ್ದ ಸಾಕ್ಷಿ ನುಡಿಯಬಹುದು ಎಂಬ ಕಾರಣದಿಂದಾಗಿ ನಾನು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎ.ಕೆ . ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ